# ಹಬ್ಬಗಳ ಆಚರಣೆ ತಿಳಿವ ಕುತೂಹಲ

ವಿದೇಶೀಯರಿಗೆ ನಮ್ಮ ಸಂಸ್ಕೃತಿ ಕೆಲವೊಮ್ಮೆ ವಿಚಿತ್ರವಾಗಿ ಕಾಣಬಹುದು. ಏಕೆಂದರೆ ಇಲ್ಲಿನ ಆಚಾರ ವಿಚಾರ, ಆಚರಣೆ, ಹಬ್ಬ ಹರಿದಿನಗಳು, ಆಹಾರ ಕ್ರಮ ಎಲ್ಲವೂ ವೈವಿಧ್ಯಮಯ ಹಾಗೂ ಬೇರೆ ದೇಶಗಳಿಗಿಂತ ಭಾರತೀಯ ಸಂಸ್ಕೃತಿ, ಪದ್ಧತಿಗಳು ಸಂಪೂರ್ಣವಾಗಿ ಭಿನ್ನ. ಆದರೂ ಇಲ್ಲಿಗೆ ಉದ್ಯೋಗ, ಶಿಕ್ಷಣ, ವ್ಯಾಪಾರ ಮುಂತಾದ ಉದ್ದೇಶಗಳಿಗಾಗಿ ಬಂದು ನೆಲೆ ನಿಂತವರಿಗೆ ಇವೆಲ್ಲವೂ ಮೊದಲಿಗೆ ವಿಭಿನ್ನ, ವಿಚಿತ್ರವಾಗಿ ಎನಿಸಿದರೂ ಎಲ್ಲದಕ್ಕೂ ಒಗ್ಗಿಕೊಂಡು 'ಎಲ್ಲರೊಳಗೊಂದಾಗಿ' ಬೆರೆಯುತ್ತಾರೆ. ಇದು ವಿದೇಶೀಯರ ದೊಡ್ಡ ಗುಣವೆಂದೇ ಹೇಳಬೇಕು.

ಫ್ರಾನ್ಸ್‌ನ ಒರ್ಲೀನ್ಸ್‌ನಿಂದ ಎರಡು ವರ್ಷ ಹಿಂದೆ ಬೆಂಗಳೂರಿಗೆ ಉದ್ಯೋಗ ನಿಮಿತ್ತ ಬಂದ ಮೈಕೆಲ್ ಡೆಮಿಯೊನ್ ಹಾಗೂ ಇವರ ಪತ್ನಿ ಮರಿಯಾನ್ ಕೂಡ ಮೇಲಿನ ಮಾತಿಗೆ ಹೊರತಲ್ಲ. ಬಂದ ಶುರುವಿಗೆ ಇಲ್ಲಿಗೆ ಹೊಂದಿಕೊಳ್ಳುವುದು ಈ ದಂಪತಿಗೆ ಕಷ್ಟವಾದರೂ ಬರಬರುತ್ತಾ ಇಲ್ಲಿಗೆ ಚೆನ್ನಾಗಿ ಹೊಂದಿಕೊಂಡಿದ್ದಲ್ಲದೆ ಎಲ್ಲವನ್ನೂ ಇಲ್ಲಿಯ ಕ್ರಮದಂತೇ ಅನುಸರಿಸುತ್ತಿದ್ದಾರೆ. ತಮ್ಮ ಮಕ್ಕಳಾದ ಮಯಾನ್, ಕ್ಲಾರಿಸ್ ಮತ್ತು ಅನೌಕ್.. ಇವರಿಗೂ ಇಲ್ಲಿನ ಸಂಸ್ಕೃತಿಯನ್ನೇ ಅನುಸರಿಸುವಂತೆ ಹುರಿದುಂಬಿಸುತ್ತಿದ್ದಾರೆ. ಹಬ್ಬಗಳ ಆಚರಣೆಯನ್ನು ಕಂಡು ಖುಷಿಪಡುತ್ತಾರೆ, ಊಟ ಉಪಚಾರಗಳನ್ನು ಅನುಸರಿಸುತ್ತಾರೆ, ಭಾಷೆ ಕಲಿಯಲು ಪ್ರಯತ್ನಿಸುತ್ತಾರೆ.. ಒಟ್ಟಿನಲ್ಲಿ ಬೆಂಗಳೂರಿನಲ್ಲಿ ಸಂತೃಪ್ತಿಯ ಜೀವನ ನಡೆಸಲು ಮುಂದಾಗಿದೆ ಈ ಫ್ರಾನ್ಸ್ ಕುಟುಂಬ.

ಜಗತ್ತಿನ ಅತ್ಯಂತ ಸುಂದರ ನಗರ ಪ್ಯಾರಿಸ್ ಡೆಮಿಯೊನ್ ಅವರ ಊರಿನ ಪಕ್ಕದ ನಗರವಂತೆ. ಅಲ್ಲಿನ ನಗರ ಸೌಂದರ್ಯದಂತೆಯೇ ಅವರಿಗೆ ಬೆಂಗಳೂರು ಕೂಡ ಅನಿಸಿದೆಯಂತೆ. 'ಫ್ರಾನ್ಸ್‌ನ ಸಂಸ್ಕೃತಿಗೂ ಇಲ್ಲಿನದಕ್ಕೂ ಬಹಳ ವ್ಯತ್ಯಾಸವಿದೆ' ಎನ್ನುವ ಡೆಮಿಯೊನ್ ಇಲ್ಲಿ ಖಾಸಗಿ ಕಂಪೆನಿಯೊಂದರಲ್ಲಿ ನಿರ್ದೇಶಕರಾಗಿದ್ದಾರೆ.

ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಓದಿರುವ ಡೆಮಿಯೊನ್ ಅವರಿಗೆ ಇಲ್ಲಿಗೆ ಬರುವ ಮುನ್ನ ಇಂಡಿಯಾ ಎಂದರೆ ದೆಹಲಿ ಒಂದೇ ಎಂಬ ಕಲ್ಪನೆ ಇತ್ತಂತೆ. ಬೆಂಗಳೂರು ಮಹಾ ನಗರ ಎಂದೂ ತಿಳಿದಿರಲಿಲ್ಲವಂತೆ. ಬೆಂಗಳೂರಿಗೆ ಬಂದ ಮೇಲೆ ಕೆಲಸದ ನಿಮಿತ್ತ ಮುಂಬೈ, ಪುದುಚೇರಿ ಮುಂತಾದ ಕಡೆ ಪ್ರವಾಸ ಮಾಡಿದ ಕಾರಣ ಇಂಡಿಯಾ ಎಂದರೆ ಇದೊಂದು ಬಹುವೈವಿಧ್ಯದ ನಗರ ಎಂಬುದನ್ನು ಮನಗಂಡಿದ್ದಾರೆ.

ಇಲ್ಲಿನ ಹಬ್ಬಗಳ ಆಚರಣೆಯನ್ನು ಬಹುವಾಗಿ ಪ್ರೀತಿಸುವ ಮರಿಯಾನ್, ಇಲ್ಲಿನ ಸಂಪ್ರದಾಯ, ಹಬ್ಬದ ರೀತಿ ರಿವಾಜು, ಆಚರಣೆಯ ವೈವಿಧ್ಯತೆ ಎಲ್ಲವೂ ಬಹಳ ಆಕರ್ಷಕ. ಹಬ್ಬ ಎಂದರೆ ಎಣ್ಣೆ ಸ್ನಾನ, ಹೊಸ ಬಟ್ಟೆ, ಪೂಜೆ–ಪುನಸ್ಕಾರ, ಸಿಹಿಯೂಟ, ಪ್ರಸಾದ ವಿನಿಯೋಗ, ತಾಂಬೂಲ ನೀಡುವಿಕೆ...ಇವೇ ಮುಂತಾದ ಪದ್ಧತಿ ಇವರಿಗೆ ಹೊಸದು. ಆದರೆ ಇದನ್ನು ಅತ್ಯಂತ ಕುತೂಹಲದಿಂದ ನೋಡಿ ಆನಂದಿಸಿದ್ದಾರೆ.

'ನಮ್ಮ ಮಕ್ಕಳಿಗೆ ಇಲ್ಲಿಯ ಸಂಸ್ಕೃತಿ, ಆಚಾರ ವಿಚಾರಗಳನ್ನು ತಿಳಿಯುವ ಕುತೂಹಲ, ಆಸಕ್ತಿ. ವೈವಿಧ್ಯಮಯ ಜನರನ್ನು ಭೇಟಿಯಾಗುವ ಅವಕಾಶ ಸಿಗುತ್ತಿದೆ. ಶಾಲೆಯಲ್ಲೂ ಹಲವಾರು 'ಇಂಡಿಯನ್ ಫ್ರೆಂಡ್ಸ್' ಅನ್ನು ಪಡೆದಿದ್ದು ಮಕ್ಕಳ ಆಸಕ್ತಿಗೆ ಪೂರಕವಾಗಿದೆ. ಯಾವುದಾದರೂ ಹಬ್ಬ ಬಂದರೆ 'ಎತ್ನಿಕ್ ಇಂಡಿಯನ್ ಡ್ರೆಸ್' ಹಾಕಿಕೊಳ್ಳಲು ಮಕ್ಕಳು ಇಷ್ಟಪಡುತ್ತಾರೆ. ಉಡುಪು ಅಷ್ಟೇ ಅಲ್ಲದೆ ಓಲೆ, ಸರ, ಬಳೆಗಳನ್ನೂ ತೊಟ್ಟು ಸಂಭ್ರಮ ಪಡುತ್ತಾರೆ' ಎನ್ನುತ್ತಾರೆ ಮರಿಯಾನ್.

ಮರಿಯಾನ್‌ಗೆ ಫ್ಯಾಷನ್ ಡಿಸೈನಿಂಗ್, ಫ್ಯಾಬ್ರಿಕೇಷನ್ ಮೇಲೆ ಎಲ್ಲಿಲ್ಲದ ಮೋಹ. ಹೀಗಾಗಿ ಮರಿಯಾನ್ ಚಿಕ್ಕಪೇಟೆ ಹಾಗೂ ಮಲ್ಲೇಶ್ವರಂನಲ್ಲಿರುವ ಫ್ಯಾಬ್ರಿಕ್ ಮಾರುಕಟ್ಟೆಗೆ ಆಗಾಗ ಭೇಟಿ ನೀಡುತ್ತಾರೆ. ಇಲ್ಲಿ ಎಲ್ಲ ದೇಶಗಳ ವೈವಿಧ್ಯಮಯ ಉಡುಪುಗಳೂ ಇಲ್ಲಿ ಲಭ್ಯ. ಫ್ಯಾಷನ್ ಉಡುಪುಗಳ ಲೋಕ ಅದ್ಭುತವಾದದ್ದು ಎಂದು ಹೇಳುತ್ತಾರೆ.



ಫ್ರಾನ್ಸ್‌ನಿಂದ ಬಂದ ಮೈಕೆಲ್ ಡೆಮಿಯಾನ್ ಕುಟುಂಬ ಸದಸ್ಯರೊಂದಿಗೆ

**ಆಹಾ ಚಿಕನ್ ಮಸಾಲ..!**

'ಯಾವುದೇ ಸಂಸ್ಕೃತಿ ಇರಲಿ, ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ಇಲ್ಲಿನ ಆಹಾರ ಕ್ರಮ ಚೆನ್ನಾಗಿದೆ. ದಾಲ್, ನಾನ್, ಚಿಕನ್ ಮಸಾಲ, ಪನ್ನೀರ್ ಡಿಶ್‌ಗಳು ಮನೆಯಲ್ಲಿ ಎಲ್ಲರಿಗೂ ಇಷ್ಟ. ಈ ಪದಾರ್ಥಗಳನ್ನು ಅಡುಗೆ ಮಾಡುವುದೂ ಸುಲಭ. ಹೋಟೆಲ್‌ಗಳಲ್ಲೂ ಶುದ್ಧ ಆಹಾರ ಸಿಗುತ್ತದೆ. ವಾರಾಂತ್ಯದಲ್ಲಿ ಮಕ್ಕಳ ಜತೆಗೂಡಿ ಹೋಟೆಲ್‌ಗೆ ಹೋಗುತ್ತೇವೆ. ಸಹಕಾರ ನಗರದಲ್ಲಿರುವ ಡ್ರುಯಿಡ್ ಗಾರ್ಡನ್ ನಲ್ಲಿ ಊಟ ಮಾಡುವುದು ಎಲ್ಲರಿಗೂ ಇಷ್ಟ' ಎನ್ನುತ್ತಾರೆ ಡೆಮಿಯಾನ್.

'ಇಲ್ಲಿನ ಜನ ಸ್ನೇಹಪರರು. ಯಾವುದೇ ವಿಷಯದಲ್ಲಿ ಮನಸ್ತಾಪ ಬಂದರೂ ಸ್ವಲ್ಪ ಹೊತ್ತಿನ ಬಳಿಕ ಸರಿಯಾಗಿ ಮಾತನಾಡುತ್ತಾರೆ. ಮನಸ್ಸಿನಲ್ಲಿ ಇಟ್ಟುಕೊಂಡು ದ್ವೇಷ ಸಾಧಿಸುವ ಜಾಯಮಾನ ಇಲ್ಲಿನ ಜನರದ್ದಲ್ಲ. ಹೀಗಾಗಿ ಕಚೇರಿಯಲ್ಲಿ ಎಲ್ಲ ಕೆಲಸಗಳೂ ಬಹಳ ಸುಗಮವಾಗಿ ಸಾಗುತ್ತವೆ. ಎಲ್ಲ ಸಹೋದ್ಯೋಗಿಗಳು ಹಸನ್ಮುಖಿರಾಗಿಯೇ ಇರುತ್ತಾರೆ. ಪರಸ್ಪರ ಸಹಕಾರ ಮನೋಭಾವನೆ ಇಲ್ಲಿನ ಜನರಲ್ಲಿರುವುದು ಸಮಾಧಾನ ತಂದಿದೆ' ಎನ್ನುತ್ತಾರೆ ಡೆಮಿಯಾನ್.

ಇಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಿಗುತ್ತದೆ. ಹೀಗಾಗಿ ವಿದೇಶಗಳಿಂದ ಸಾವಿರಾರು ಮಂದಿ ಶಿಕ್ಷಣ ಪಡೆಯುವುದಕ್ಕಾಗಿಯೇ ಭಾರತಕ್ಕೆ ಬರುತ್ತಾರೆ. 'ಬೆಂಗಳೂರಿನಲ್ಲೂ ಸಾಕಷ್ಟು ವಿದೇಶೀ ವಿದ್ಯಾರ್ಥಿಗಳಿದ್ದು, ಓದಿನ ನಂತರ ಕೆಲಸವನ್ನೂ ಹಿಡಿದು ಸ್ವಾವಲಂಬಿಗಳಾಗಿದ್ದಾರೆ. ಉದ್ಯೋಗಾವಕಾಶವೂ ಇಲ್ಲಿರುವುದರಿಂದ ವಿದೇಶೀಯರು ಮರಳಿ ತಮ್ಮ ದೇಶಗಳಿಗೆ ಹೋಗಲು ಇಷ್ಟಪಡುವುದಿಲ್ಲ ಎನ್ನುವ ಡೆಮಿಯಾನ್, ಇಲ್ಲಿನ ವಾತಾವರಣವೂ ಬಹಳ ಚೆನ್ನಾಗಿರುವುದರಿಂದ ಬಹಳಷ್ಟು ಮಂದಿ ಇಲ್ಲಿಯೇ ಖಾಯಂ ಆಗಿ ನೆಲೆಸಲು ಇಷ್ಟಪಡುತ್ತಿದ್ದಾರೆ' ಎನ್ನುತ್ತಾರೆ.

'ಬೆಂಗಳೂರು ಸುಂದರ ನಗರ. ಇಲ್ಲಿನ ಹಸಿರ ಸಿರಿ ಎಂಥವರನ್ನೂ ಥಟ್ಟನೆ ಸೆಳೆಯುತ್ತದೆ. ಇದಕ್ಕೆ ಪೂರಕವಾದ ಹವಾಮಾನವೂ ಇಲ್ಲಿರುವುದರಿಂದ ಜನ ನಿಜಕ್ಕೂ ಈ ನಗರವನ್ನು, ಇಲ್ಲಿನ ಸೌಂದರ್ಯವನ್ನು ಇಷ್ಟಪಡುತ್ತಾರೆ. ನಾವು ಕೂಡ ಇಲ್ಲಿಂದ ಮರಳಿ ಹೋಗುವ ಯೋಚನೆಯನ್ನೂ ಮಾಡಿಲ್ಲ' ಎಂಬುದು ಡೆಮಿಯಾನ್ ಸ್ಪಷ್ಟನುಡಿ.

**ಅವನೀಶ್**